# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿ.ಜಿ.ಎಂ–1383/2018/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 13/12/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಅಕ್ಬರ್‌ಪಾಶಾ ಹಾಜೀಫೀರ್ ಅತ್ತಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ, (2) ಶ್ರೀ ಪಂಡಿತ, ಕಛೇರಿ ಅಧೀಕ್ಷಕರು, ಕರ್ನಾಟಕ ಗೃಹ ಮಂಡಳಿ, ಯಾದಗಿರಿ (3) ಶ್ರೀ ಮಲ್ಲಪ್ಪ ಜಿ. ಸುಖಾಲಿ, ದ್ವಿತೀಯಾ ದರ್ಜೆ ಸಹಾಯಕರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ ಹುಬ್ಬಳ್ಳಿ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. (1) ಶ್ರೀ ಅಕ್ಬರ್‌ಪಾಶಾ ಹಾಜೀಫೀರ್ ಅತ್ತಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ, (2) ಶ್ರೀ ಅರುಣ ಹೆಚ್. ನಾಯಕ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ, (3) ಶ್ರೀ ಪಂಡಿತ, ಹಿಂದಿನ ಕಛೇರಿ ಅಧೀಕ್ಷಕರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ ಮತ್ತು (4) ಶ್ರೀ ಮಲ್ಲಪ್ಪ ಜಿ. ಸುಖಾಲಿ, ದ್ವಿತೀಯಾ ದರ್ಜೆ ಸಹಾಯಕರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ಸ್ವ ದೂರು ದಾಖಲಿಸಲು ಆದೇಶವಾಗಿರುತ್ತದೆ.

2. ದೂರಿನ ಸಾರಾಂಶ:-

1ನೇ ಎದುರುದರರು ಮುದ್ದೇಬಿಹಾಳ ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೈಗೊಂಡಿರುವ 1ನೇ ಹಂತದ ನಿರ್ಮಾಣಗೊಂಡ ಬಡಾವಣೆಯಲ್ಲಿ ಬಹುತೇಕ ನಿವೇಶನ/ಮನೆಗಳು 1ನೇ ಎದುರುದಾರರ ತಂಗಿ, ಅಳಿಯ ಹಾಗೂ ಸಂಬಂಧಿಕರಿಗೆ ಹಂಚಿಕೆಗೊಳಿಸಲು ತಮ್ಮ ಪ್ರಭಾವವನ್ನು ಬಳಸಿರುತ್ತಾರೆ. ನಿವೇಶನ/ಮನೆ ಕೊಡಿಸುತ್ತೇನೆ ಎಂದು ಆರಂಭಿಕ ಠೇವಣಿ ಹಣ ತುಂಬಿದವರಿಂದ ಹೊರಗಿನಿಂದಲೇ ಡೀಲ್ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಪಡೆದು ಗೃಹ ಮಂಡಳಿ ಆಯುಕ್ತರ ನಕಲಿ ಸಹಿ ಮಾಡಿ ನಕಲಿ ಪತ್ರ ನೀಡಿರುತ್ತಾರೆ. ಮನೆ ಮತ್ತು ನಿವೇಶನಗಳಿಗೆ ಪೂರ್ಣ ಹಣ ಪಾವತಿಯಾಗದೆ 400ಕ್ಕೂ ಅಧಿಕ ಕ್ರಯ ಪತ್ರ ಜರುಗಿಸಿರುವ ಪ್ರಕರಣಗಳಿರುವುದಾಗಿ ಆರೋಪಗಳಿದ್ದು ಸ್ವಯಂ ದೂರು ದಾಖಲಿಸಿ ತನಿಖೆ ಮಾಡಲು ಅದೇಶಿಸಲಾಗಿರುತ್ತದೆ.

3. ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ರವರು ದೂರಿನ ಆರೋಪಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ.

4.ತನಿಖಾ ವರದಿಯ ಅಂಶಗಳು:

(1) ಶ್ರೀ ಬಸವರಾಜ ಬಿನ್ ಗುರುಬಸಪ್ಪ ಕೋರಿ ನಿವೇಶನ ಸಂಖ್ಯೆ: 128 ಎಂ.ಐ.ಜಿ., (2) ಶ್ರೀ ಕಾಶೀಂ ರಾಜೀಸಾಬ್ ಮೂಲಿಮನಿ, ಪ್ಲಾಟ್ ನಂ. 184 ಎಂ.ಐ.ಜಿ., (3) ಶ್ರೀ ಹಣಮಂತ ತಿರಕಪ್ಪ ಕುರಿ ಮನೆ ನಂ. 229, (4) ಶ್ರೀ ಅಕ್ಬರಬಾಷಾ ಹಾಜೀಪೀರ್ ಅತ್ತಾರ ಮನೆ ನಂ. 39 ಎಂ.ಐ.ಜಿ., (5) ಶ್ರೀಮತಿ ಪರ್ವಿಣ ಕಾಶೀಂಸಾಬ್ ಮೂಲಿಮನಿ ಪ್ಲಾಟ್ ನಂ. 38 ಹೆಚ್.ಐ.ಜಿ. ಒಟ್ಟು 2 ಮನೆ ಮತ್ತು 3 ನಿವೇಶನಗಳು ಸರ್ಕಾರಕ್ಕೆ ಭರಿಸಬೇಕಾದ ಹಣವನ್ನು ಸದರಿಯವರು ಭರಿಸದೆ ಕರ್ನಾಟಕ ಗೃಹ ಮಂಡಳಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಕಛೇರಿ ಅಧೀಕ್ಷಕರು ಹಾಗೂ ವಿಷಯ ನಿರ್ವಾಹಕರು ಮೇಲೆ ನಮೂದಿಸಿದವರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ಸಲ್ಲಬೇಕಾದ ಹಣ ಕಟ್ಟದೆ ಪರಭಾರೆಯಾಗಿ ವ್ಯವಹಾರ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿದ ಬಗ್ಗೆ ತನಿಖಾಧಿಕಾರಿಗಳು ತನಿಖಾ ಅವಧಿಯಲ್ಲಿ ಆಧಾರಗಳನ್ನು ಸಂಗ್ರಹಿಸಿರುತ್ತಾರೆ.

1ನೇ ಎದುರುದಾರರು ಕರ್ನಾಟಕ ಗೃಹ ಮಂಡಳಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ತನ್ನ ಅಧಿಕಾರವನ್ನು ದುರ್ಬಳಕೆ ಪಡಿಸಿಕೊಂಡು ತನ್ನ ಹೆಸರಿನಲ್ಲಿದ್ದ ಮನೆಗೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಕಟ್ಟಬೇಕಾದ ಹಣವನ್ನು ಕಟ್ಟದೆ ಅಧಿಕಾರ ದುರ್ಬಳಕೆ ಪಡಿಸಿಕೊಂಡಿದಲ್ಲದೆ ಸದರಿಯವರ ತಂಗಿ ಮತ್ತು ತಂಗಿಯ ಗಂಡನ ಹೆಸರಿನಲ್ಲಿ ಮತ್ತು ಶ್ರೀ ಬಸವರಾಜ ಕೋರಿ ಮತ್ತು ಹಣಮಂತರಾಯ ಕುರಿ ಇವರುಗಳ ಹೆಸರಿನಲ್ಲಿ ಮನೆ ಮತ್ತು ನಿವೇಶನಗಳನ್ನು ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರೊಂದಿಗೆ ಶಾಮೀಲಾಗಿ ಖರೀದಿ ಹಾಕಿಕೊಟ್ಟು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ.

ಸದರಿ ಮನೆ ಮತ್ತು ನಿವೇಶನಗಳನ್ನು ಪರಭಾರೆಯಾಗಿ ಖರೀದಿ ಮಾಡಿಕೊಟ್ಟ ಸಂದರ್ಭದಲ್ಲಿ 2ನೇ ಎದುರುದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ ಸನ್ 2006 ರಿಂದ 2015ರ ಅವಧಿಯಲ್ಲಿ ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ. 3ನೇ ಎದುರುದಾರರು ಸದರಿ ಅವಧಿ ಅಂದರೆ 2013 ರಿಂದ 2017 ರವರೆಗೆ ಕಛೇರಿ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಾರೆ. 4ನೇ ಎದುರುದಾರರು ದ್ವಿತೀಯಾ ದರ್ಜೆ ಸಹಾಯಕರು ಸನ್ 2016 ರಿಂದ 2017ನೇ ಸಾಲಿನಲ್ಲಿ ವಿಷಯ ನಿರ್ವಾಹಕರಾಗಿರುತ್ತಾರೆ. ಸದರಿಯವರು ಜವಾಬ್ದಾರಿಯುತ ನೌಕರರು/ಅಧಿಕಾರಿಗಳಾಗಿದ್ದು, ಮೇಲೆ ನಮೂದಿಸಿದ ನಿವೇಶನ/ಮನೆ ಹೊಂದಿದ ಸದಸ್ಯರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

**5.** 1ನೇ ಎದುರುದಾರರ ಆಕ್ಷೇಪಣೆಗಳು:–

ದಿನಾಂಕ: 16/09/2013 ರಂದು ಪೂರ್ವಾಹ್ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ ಇಲ್ಲಿ ಕಿರಿಯ ಅಭಿಯಂತರರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು ದಿನಾಂಕ: 23/03/2015 ರ ಅಪರಾಹ್ನ ಸದರಿ ಕಛೇರಿಯ ಕರ್ತವ್ಯಗಳಿಂದ ಬಿಡುಗಡೆಯಾಗಿರುತ್ತೇನೆ. ತನಿಖಾ ವರದಿಯಲ್ಲಿನ ಅಂಶಗಳಿಗೂ ನನಗೂ ಯಾವುದೇ ಸಂಬಂಧವಿರುವುದಿಲ್ಲ.

(1) ಶ್ರೀ ಕಾಶೀಂ ಸಾಬ್ ರಾಜೆಸಾಬ್ ಮೂಲಿಮನಿ ಇವರಿಗೆ ನಿವೇಶನ ಸಂಖ್ಯೆ : 222 ಮತ್ತು 184 ಹಂಚಿಕೆಯಾಗಿದ್ದು ನನ್ನ ತಂಗಿಯ ಗಂಡನಾಗಿದ್ದು ದಿನಾಂಕ: 07/11/2015 ರಂದು ಮರಣ ಹೊಂದಿರುತ್ತಾರೆ.

(2) ಶ್ರೀಮತಿ ಪರ್ವಿನ್ ಕಾಶೀಂಸಾಬ್ ಮೂಲಿಮನಿ ಇವರಿಗೆ ಸಂಖ್ಯೆ: 186 ಎಂ.ಐ.ಜಿ., ಮತ್ತು 38 ಹೆಚ್.ಐ.ಜಿ., ಹಂಚಿಕೆಯಾಗಿದ್ದು ಇವರು ನನ್ನ ತಂಗಿಯಾಗಿದ್ದು ದಿನಾಂಕ: 29/05/2017 ರಂದು ಮರಣ ಹೊಂದಿರುತ್ತಾರೆ.

ಫಲಾನುಭವಿಗಳಿಗೆ ನಿವೇಶನ/ಮನೆ ಹಂಚಿಕೆ ಪ್ರಕ್ರಿಯೆಯು ನಾನು ಸದರಿ ಕಛೇರಿಯಲ್ಲಿ ಕಿರಿಯ ಅಭಿಯಂತರರ ಹುದ್ದೆಗೆ ವರದಿ ಮಾಡಿಕೊಳ್ಳುವ ಪೂರ್ವದಲ್ಲೇ ಮುಕ್ತಾಯವಾಗಿರುತ್ತದೆ. ಫಲಾನುಭವಿಗಳಿಗೆ ಕರಾರು ಪತ್ರವನ್ನು ನೋಂದಣಿ ಮಾಡಿಕೊಡುವಾಗ ಸದರಿ ನೋಂದಣಿಯನ್ನು ಅಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಸರ್ಕಾರದ ಪರವಾಗಿ ಮಾಡಿಕೊಟ್ಟಿರುತ್ತಾರೆ. ನಿವೇಶನ ಹಂಚಿಕೆ ಮಾಡುವ ಕರ್ತವ್ಯವು/ಕೆಲಸವು ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಹಂಚಿಕೆ ಮಾಡುವ ಕೆಲಸವು ಕರ್ನಾಟಕ ಗೃಹ ಮಂಡಳಿಯ ಆಯುಕ್ತರಿಗೆ ಸೇರಿರುತ್ತದೆ ಎಂದು ನಮೂದಿಸಿರುತ್ತಾರೆ.

6. 2ನೇ ಎದುರುದಾರರು ಮೃತ ಪಟ್ಟಿದ್ದು ಮರಣ ಪ್ರಮಾಣ ಪತ್ರ ಸಂಗ್ರಹಿಸಲಾಗಿರುತ್ತದೆ.

7. 3ನೇ ಎದುರುದಾರರ ಆಕ್ಷೇಪಣೆಗಳು:

ನಾನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಕಾರ್ಯಾಲಯದ ಅಧೀಕ್ಷಕನಾಗಿ ಕೆಲಸ ನಿರ್ವಹಿಸಿದ್ದೆ. ಕರ್ನಾಟಕ ಗೃಹ ಮಂಡಳಿ, ವಿಜಯಪುರದಲ್ಲಿ ನಿವೇಶನಕ್ಕೆ ಅರ್ಜಿ ಹಾಕುವವರು ಕರ್ನಾಟಕ ಗೃಹ ಮಂಡಳಿಯ ಆಯುಕ್ತರ ಹೆಸರಿನಲ್ಲಿ ಡಿ.ಡಿ. ತೆಗೆದುಕೊಂಡು ಅರ್ಜಿ ಹಾಕುತ್ತಾರೆ. ಯಾರಿಗೆ ನಿವೇಶನ ಹಂಚಿಕೆಯಾಗಿದೆಯೋ ಅವರಿಂದ ಮೊದಲು ಹಣ ಕಟ್ಟಿಸಿಕೊಳ್ಳುವ ಕೆಲಸ ಕ್ರಯ ಪತ್ರ ಮಾಡಿಕೊಡುವ ಅಧಿಕಾರ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಇರುತ್ತದೆ. ಚಲನ್ ಹಣ ಸಂದಾಯವಾಗಿದೆಯೋ ಅಥವಾ ಬಾಕಿ ಇದೆಯೋ, ಎಂದು ನಮೂದಿಸಿ ಪೆನಾಲ್ಟಿ ಕಟ್ಟಿಸುವುದು ವಿಷಯ ನಿರ್ವಾಹಕನ ಕೆಲಸವಾಗಿರುತ್ತದೆ. ಎಲ್ಲಾ ಸಂದಾಯ ಮಾಡಿದವರಿಗೆ ಕ್ರಯ ಪತ್ರ ನೀಡಬಹುದು ಎಂದು ತಿಳಿಸುವುದು ಕಛೇರಿಯ ಅಧೀಕ್ಷಕರ ಕೆಲಸವಾಗಿರುತ್ತದೆ. ಅಂತಿಮವಾಗಿ ಕ್ರಯ ಪತ್ರ ನೀಡುವುದು ಸಹಾಯಕ ಕಾರ್ಯಪಾಲಕ ಅಭಿಯಂತರರ ಕೆಲಸವಾಗಿರುತ್ತದೆ.

ಮುದ್ದೆಬಿಹಾಳ ಪಟ್ಟಣದ ಗೃಹ ಮಂಡಳಿಯ ಸಂಖ್ಯೆ: 1 ರಿಂದ 154 ಕಡತಗಳನ್ನು ನಾನು ಶ್ರೀ ಗೋವಿಂದರಾಜ, ಪ್ರಥಮ ದರ್ಜೆ ಸಹಾಯಕ ರವರಿಗೆ ಹಸ್ತಾಂತರಿಸಿದ್ದೇನೆ. ಮುದ್ದೆಬಿಹಾಳ ಪಟ್ಟಣದಲ್ಲಿಯ ನಿವೇಶನಗಳು/ಮನೆಗಳ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ

ನೋಂದಣಿಯಾದ ಕ್ರಯಪತ್ರದ ಮೇಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬಿಜಾಪುರ ರವರ ಸೀಲಿನ ಕೆಳಗಿರುವ ಕಿರು ರುಜು ನನ್ನದಲ್ಲ ಯಾರೋ ನನ್ನ ಸಹಿಯಂತೆ ನಕಲಿ ಸಹಿ ಮಾಡಿ ಕ್ರಯ ಪತ್ರಗಳನ್ನು ಮಾಡಿಕೊಂಡಿರುತ್ತಾರೆ. ಈ ವಿಷಯವಾಗಿ ಮಾನ್ಯ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ರವರಿಗೆ ದಿನಾಂಕ: 05/09/2018 ರಂದು ಅರ್ಜಿ ಸಲ್ಲಿಸಿರುತ್ತೇನೆ ಎಂದು ನಮೂದಿಸಿರುತ್ತಾರೆ.

8. 4ನೇ ಎದುರುದಾರರ ಆಕ್ಷೇಪಣೆಗಳು:

2016 ರಿಂದ 2017ನೇ ಸಾಲಿನಲ್ಲಿ ನಾನು ಕರ್ನಾಟಕ ಗೃಹ ಮಂಡಳಿ ವಿಜಯಪೂರ ಕಛೇರಿಯಲ್ಲಿ ವಿಷಯ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿದ್ದು ಹಂಚಿಕೆದಾರರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ಮೋಸ ಮಾಡಿರುವುದಾಗಿ ಉಲ್ಲೇಖಿಸಿದ್ದು, ಇದು ಸತ್ಯಕ್ಕೆ ದೂರವಾಗಿರುತ್ತದೆ. ಸದರಿ ಮನೆ/ನಿವೇಶನಗಳ ಕ್ರಯ ಪತ್ರಗಳನ್ನು ನಾನು ನಿರ್ವಹಿಸಿರುವುದಿಲ್ಲ. ನನ್ನ ಸಹಿ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

9. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳನ್ನು ಪರಿಶೀಲಿಸಲಾಗಿರುತ್ತದೆ.

10. ತನಿಖಾಧಿಕಾರಿಗಳು ಸಂಗ್ರಹಿಸಿದ ಆಧಾರಗಳಿಂದ ಈ ಕೆಳಕಂಡ ಅಂಶಗಳು ಧೃಡಪಟ್ಟಿರುತ್ತದೆ.

(1) ಶ್ರೀ ಬಸವರಾಜ ತಂದೆ ಗುರುಬಸಪ್ಪ ಕೋರಿ ಇವರ ಹೆಸರಿನಲ್ಲಿ ನಿವೇಶನ ನಂಬರ್ 178 ಎಂ.ಐ.ಜಿ. ಇದ್ದು ಗೃಹಮಂಡಳಿಯಲ್ಲಿ ಯಾವುದೇ ಕಡತಗಳು ಲಭ್ಯವಿರುವುದಿಲ್ಲ. ಉಪ ನೊಂದಣಾಧಿಕಾರಿಗಳು, ಮುದ್ದೇಬಿಹಾಳ ರವರಿಂದ ಪಡೆದ ಮಾಹಿತಿಯಂತೆ ಕರ್ನಾಟಕ ಗೃಹ ಮಂಡಳಿ ವಿಜಯಪುರ ರವರು ನಡೆಸಿದ ಹರಾಜು ಪ್ರಕ್ರಿಯೆಯಲ್ಲಿ ಬಸವರಾಜ ಕೋರಿ ಇವರು ರೂ. 15,13,688/– ಗಳಿಗೆ ಹರಾಜಿನಲ್ಲಿ ಪಡೆದುಕೊಂಡು, ಉಪನೊಂದಣಾಧಿಕಾರಿಗಳು, ಮುದ್ದೇಬಿಹಾಳ ಇವರಲ್ಲಿ ಖರೀದಿ ಮಾಡಿಕೊಂಡಿರುತ್ತಾರೆ.

ಶ್ರೀ ಬಸವರಾಜರವರು ಸದರಿ ನಿವೇಶನಕ್ಕೆ ಆರಂಭಿಕ ಠೇವಣಿ ರೂ. 1,80,000/- ಗಳನ್ನು ಕಟ್ಟಿದ್ದು, ಇನ್ನುಳಿದ ಹಂತವನ್ನು ಕಟ್ಟಲು ಆಗದೆ ವಿಚಾರವನ್ನು 1ನೇ ಎದುರುದಾರರಿಗೆ ತಿಳಿಸಿದ್ದು ಹಣವನ್ನು ಕಟ್ಟಲು ಆಗದೇ ಸದರಿ ಮನೆಯನ್ನು ಕಸ್ತೂರಿಬಾಯಿ ಇವರಿಗೆ ಮಾರಾಟ ಮಾಡಿಸಿ 1,20,000/- ಗಳು ಕೊಟ್ಟಿದ್ದು, ರೂ. 60,000/- ಗಳು ನಂತರ ಕೊಡುವುದಾಗಿ ತಿಳಿಸಿ ಇಲ್ಲಿಯವರೆಗೂ 1ನೇ ಎದುರುದಾರರು ನೀಡಿರುವುದಿಲ್ಲ ಎಂದು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತಾರೆ.

(2) ಶ್ರೀ ಕಾಶೀಂಸಾಬ್ ರಾಜಿಸಾಬ್ ಮೂಲಿಮನಿ ಇವರು 1ನೇ ಎದುರುದಾರರ ತಂಗಿಯ ಗಂಡ ಇದ್ದು, ಸದರಿಯವರ ಹೆಸರಿನಲ್ಲಿ ನಿವೇಶನ ಸಂ: 222 ಮತ್ತು 184 ಇರುತ್ತದೆ. ನಿವೇಶನ ನಂ. 184 ಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಗೃಹ ಮಂಡಳಿ ವಿಜಯಪುರ ಇಲ್ಲಿ ಕಡತ ಲಭ್ಯವಿರುವುದಿಲ್ಲ. ಖರೀದಿ ಹಾಕಿಸಿಕೊಂಡ ಬಗ್ಗೆ ಉಪನೊಂದಣಾಧಿಕಾರಿಗಳು, ಮುದ್ದೇಬಿಹಾಳ ಇವರು ನಕಲು ಪ್ರತಿಯನ್ನು ಪೂರೈಸಿರುತ್ತಾರೆ.

(3) ಶ್ರೀ ಹಣಮಂತರಾಯ ತಿ ಕುರಿ ರವರ ಹೆಸರಿನಲ್ಲಿ ಮನೆ ನಂ. 229 ಮತ್ತು ನಿವೇಶನ ಸಂ. 151 ಇದ್ದ ಬಗ್ಗೆ ಮಾಹಿತಿಯನ್ನು ಗೃಹ ಮಂಡಳಿ ಪೂರೈಸಿದ್ದು ಶ್ರೀ ಹಣಮಂತರಾಯ ತಿ ಕುರಿ ಇವರನ್ನು ವಿಚಾರಿಸಲಾಗಿ ಮನೆ ನಂ. 229 ಕ್ಕೆ ಸಂಬಂಧಿಸಿದಂತೆ ಯಾವುದೇ ಅರ್ಜಿಯು ಸಲ್ಲಿಸಿರುವುದಿಲ್ಲ ಮತ್ತು ದುಡ್ಡು ಸಹಿತ ಕಟ್ಟಿರುವುದಿಲ್ಲ ಎಂದು 1ನೇ ಎದುರುದಾರರು ಆತನ ಹೆಸರಿನಲ್ಲಿ ಕಾಗದಪತ್ರಗಳನ್ನು ತಯಾರಿಸಿ ರೂ. 6.43,170/- ಗಳಿಗೆ ಖರೀದಿ ಮಾಡಿಸಿ ಕೊಟ್ಟಿರುತ್ತಾರೆ. ನಂತರ ಸದರಿ ಮನೆಯನ್ನು ರೂ. 28,00,000/- ಗಳಿಗೆ ಮಾರಾಟ ಮಾಡಿಸಿದ್ದು 28,00,000/- ಗಳ ಹಣವನ್ನು 1ನೇ ಎದುರುದಾರರಿಗೆ ನೀಡಿರುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ.

(4) ಶ್ರೀ ಮಲ್ಲಿಕಾರ್ಜುನ ಮದರಿ ರವರ ಹೆಸರಿನಲ್ಲಿ ನಿವೇಶನ ನಂ. 2 ಮತ್ತು 79, ಮನೆ ನಂ. 80, 212, 221 ಹೀಗೆ ಒಂದು ಮನೆ ಹಾಗೂ 4 ನಿವೇಶನಗಳಿದ್ದು ಗೃಹ ಮಂಡಳಿ ಇಲಾಖೆಯವರು ನಿರ್ಧರಿಸಿದ ಬೆಲೆಗೆ ಸಂದಾಯ ಮಾಡಿ ಖರೀದಿ ಹಾಕಿಸಿಕೊಂಡಿರುತ್ತಾರೆ.

(5) ಶ್ರೀ ಅಕ್ಬರಪಾಶಾ ಹಾಜಿಂಪೀರ್ ಅತ್ತಾರ ರವರ ಹೆಸರಿನಲ್ಲಿ ಮನೆ ನಂ. 39 ಇರುವುದಾಗಿ ತಿಳಿಸಿದ್ದು ಆರಂಭಿಕ ಠೇವಣಿ 1,61,263/- ಗಳನ್ನು ಭರಿಸಿದ್ದು, ಇನ್ನುಳಿದ ರೂ. 4,85,672/- ಹಣವನ್ನು ಸನ್ 2006 ರಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ಸಂದಾಯ ಮಾಡದೇ ಸದರಿ ಮನೆಯಲ್ಲಿಯೇ ವಾಸವಾಗಿರುತ್ತಾರೆ. ಈ ಬಗ್ಗೆ ಕರ್ನಾಟಕ ಗೃಹ ಮಂಡಳಿ ಇಲಾಖೆಯವರು ಹಣ ತುಂಬಿಸಿಕೊಳ್ಳುವ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

(6) ಶ್ರೀಮತಿ ಪರ್ವಿಣ ಕಾಶೀಂಸಾಬ್ ಮೂಲಿಮನಿ ರವರು 1ನೇ ಎದುರುದಾರರ ತಂಗಿಯಾಗಿದ್ದು ಸದರಿಯವರ ಹೆಸರಿನಲ್ಲಿ ನಿವೇಶನ ಸಂ. 186 ಎಂ.ಐ.ಜಿ. ಮತ್ತು 38 ಹೆಚ್.ಐ.ಜಿ. ಎರಡು ನಿವೇಶನಗಳು ಇದ್ದ ಬಗ್ಗೆ ಮಾಹಿತಿ ಪೂರೈಸಿರುತ್ತಾರೆ.

ಮನೆ ನಂ. 38 ಹೆಚ್.ಐ.ಜಿ. ನಿವೇಶನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗೃಹ ಮಂಡಳಿ ಇಲಾಖೆಯವರು ಕಡತಗಳು ಲಭ್ಯವಿಲ್ಲವೆಂದು ಮಾಹಿತಿಯನ್ನು ಸಲ್ಲಿಸಿರುತ್ತಾರೆಂದು ತನಿಖಾಧಿಕಾರಿಗಳು ಆಧಾರವನ್ನು ಸಂಗ್ರಹಿಸಿರುತ್ತಾರೆ.

11. ಕರ್ನಾಟಕ ಗೃಹ ಮಂಡಳಿ ವತಿಯಿಂದ ಮುದ್ದೇಬಿಹಾಳ ಪಟ್ಟಣದ 1ನೇ ಹಂತ ನಿರ್ಮಾಣಗೊಂಡ ಬಡಾವಣೆಯ ನಿವೇಶನ ಮತ್ತು ಮನೆಗಳ ಹಂಚಿಕೆಯಲ್ಲಿ 1ನೇ ಎದುರುದಾರರು ತಮ್ಮ ಪ್ರಭಾವವನ್ನು ಬಳಸಿ 2 ರಿಂದ 4ನೇ ಎದುರುದಾರರ ಸಹಕಾರದೊಂದಿಗೆ ಅಕ್ರಮ ನಡೆಸಿ 1ನೇ ಎದುರುದಾರರ ರಕ್ತ ಸಂಬಂಧಿಗಳಿಗೆ ನಿವೇಶನ/ಮನೆಗಳನ್ನು ಹಂಚಿಕೆ ಮಾಡಿ ಕರ್ತವ್ಯ ಲೋಪ ಎಸಗಿರುವ ಬಗ್ಗೆ ತನಿಖಾಧಿಕಾರಿಗಳು ಸಂಗ್ರಹಿಸಿದ ಆಧಾರಗಳಿಂದ ಕಂಡುಬಂದಿರುತ್ತದೆ.

12. 1ನೇ ಎದುರುದಾರರು ಆರಂಭಿಕ ಠೇವಣಿ ಹೊಂದಿದವರಿಂದ ಲಕ್ಷಾಂತರ ಹಣ ಪಡೆದು ಸರ್ಕಾರಕ್ಕೆ ಪೂರ್ಣ ಹಣ ಪಾವತಿಸದಿದ್ದರೂ ಕ್ರಯ ಪತ್ರಗಳನ್ನು ನೊಂದಣಿ ಮಾಡಿಸಿಕೊಡಲು ತಮ್ಮ ಪ್ರಭಾವವನ್ನು ಬಳಸಿ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

13. 2 ರಿಂದ 4ನೇ ಎದುರುದಾರರು ಸದರಿ ನಿವೇಶನ/ಮನೆಗಳನ್ನು ಖರೀದಿ ಮಾಡಿಕೊಟ್ಟ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಜವಾಬ್ದಾರಿಯುತ ಅಧಿಕಾರಿ ಹಾಗೂ ಸಿಬ್ಬಂದಿಗಳಿದ್ದು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

14. 2ನೇ ಎದುರುದಾರರು ಕ್ರಯ ಪತ್ರಗಳನ್ನು ಸರ್ಕಾರದ ಪರವಾಗಿ ಮಾಡಿಕೊಟ್ಟಿರುತ್ತಾರೆ. ಕ್ರಯ ಪತ್ರಗಳ ಪೂರ್ಣ ಹಣ ಪಾವತಿಸದಿದ್ದರೂ ಕ್ರಯ ಪತ್ರಗಳನ್ನು ನೊಂದಣಿ ಮಾಡಿಕೊಟ್ಟಿರುವುದು ತನಿಖಾಧಿಕಾರಿಗಳ ವರದಿಯಿಂದ ಕಂಡುಬಂದಿರುತ್ತದೆ. ಚಲನ್ ಹಣ ಪೂರ್ಣ ಸಂದಾಯವಾದ ಬಗ್ಗೆ ನಮೂದಿಸಬೇಕಾದ ಕರ್ತವ್ಯ ವಿಷಯ ನಿರ್ವಾಹಕರಾದ 4ನೇ ಎದುರುದಾರರದ್ದಾಗಿದ್ದು 4ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

15. ಕ್ರಯದ ಹಣ ಪೂರ್ಣ ಸಂದಾಯವಾದ ನಂತರ ಪರಿಶೀಲಿಸಿ ಅಧೀಕ್ಷಕರು ಕ್ರಯ ಪತ್ರವನ್ನು ನೀಡಬಹುದೆಂದು ನಮೂದಿಸುವ ಕರ್ತವ್ಯ ಹೊಂದಿದ್ದು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸದೆ 3ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

16. ತನಿಖಾಧಿಕಾರಿಗಳು ಸಂಗ್ರಹಿಸಿರುವ ಆಧಾರಗಳಿಂದ 1 ರಿಂದ 4ನೇ ಎದುರುದಾರರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ಮಾಹಿತಿಗಳನ್ನು ನೀಡಿ ಕರ್ತವ್ಯ ಲೋಪವೆಸಗಿದ ಬಗ್ಗೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. 2ನೇ ಎದುರುದಾರರು ಮೃತಪಟ್ಟಿರುವ ಬಗ್ಗೆ ಮರಣ ಪ್ರಮಾಣ ಪತ್ರ ಸಂಗ್ರಹಿಸಲಾಗಿರುತ್ತದೆ.

17. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ–** ಶ್ರೀ ಅಕ್ಬರ್‌ಪಾಶಾ ಹಾಜೀಫೀರ್ ಅತಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ವಿಜಯಪುರ ಜಿಲ್ಲೆ, **3ನೇ ಎದುರುದಾರರಾದ–** ಶ್ರೀ ಪಂಡಿತ, ಕಛೇರಿ ಅಧೀಕ್ಷಕರು, ಕರ್ನಾಟಕ ಗೃಹ ಮಂಡಳಿ, ಯಾದಗಿರಿ ಮತ್ತು **4ನೇ ಎದುರುದಾರರಾದ–** ಶ್ರೀ ಮಲ್ಲಪ್ಪ ಜಿ. ಸುಖಾಲಿ, ದ್ವಿತೀಯಾ ದರ್ಜೆ ಸಹಾಯಕರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋನಾ ಕಛೇರಿ, ಹುಬ್ಬಳ್ಳಿ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 12/12

**[ನ್ಯಾಯಮೂರ್ತಿ ಎನ್. ಆನಂದ]**

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ, ಬೆಂಗಳೂರು.**